

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 9 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ




ಬಿ. ರವೀಶ್ ಕುಮಾರ್
ಕನ್ನಡ ಭಾಷಾ ಶಿಕ್ಷಕರು
ಸ. ಪ್ರೌ. ಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ. 570026

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 9 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

# ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 4 |
| 5 | ನೀಲ ನಕಾಶೆ | 5 | 6 |
| 6 | ಪ್ರಶ್ನೆ ಪತ್ರಿಕೆ | 7 | 10 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 11 | 20 |
| 8 | ಪ್ರಶ್ನಾನುಸಾರ ವಿಶ್ಲೇಷಣೆ | 21 | 22 |

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 9 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 14 |
| 2 | ಗ್ರಹಿಕೆ | 36 | 36 | 19 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಅತಿ ಕಿರು ಉತ್ತರ – 1 (ಒಂದು ಅಂಕದ ಪ್ರಶ್ನೆಗಳು) | 07 | 07 | 07 |
| 3 | ಕಿರು ಉತ್ತರ – 2 (ಎರಡು ಅಂಕಗಳ ಪ್ರಶ್ನೆಗಳು) | 20 | 20 | 10 |
| 4 | ದೀರ್ಘ ಉತ್ತರ – 1 (ಮೂರು ಅಂಕಗಳ ಪ್ರಶ್ನೆಗಳು) | 33 | 33 | 11 |
| 5 | ದೀರ್ಘ ಉತ್ತರ – 2 (ನಾಲ್ಕು ಅಂಕಗಳ ಪ್ರಶ್ನೆಗಳು) | 20 | 20 | 05 |
| 6 | ದೀರ್ಘ ಉತ್ತರ – 3 (ಊದು ಅಂಕಗಳ ಪ್ರಶ್ನೆಗಳು) | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | 21 |
| 2 | ಸಾಧಾರಣ | 50 | 50 | 19 |
| 3 | ಕಠಿಣ | 20 | 20 | 05 |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಕನ್ನಡ ಮೌಲ್ವಿ | 04 | 01 |
| 2 | ಬೆಡಗಿನ ತಾಣ ಜಯಪುರ | 04 | 02 |
| 3 | ಧರ್ಮಸಮದೃಷ್ಟಿ | 04 | 02 |
| 4 | ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣನ್ | 03 | 01 |
| 5 | ಪ್ರಜಾನಿಷ್ಠೆ | 04 | 02 |
| 6 | ಜನಪದ ಕಲೆಗಳ ವೈಭವ | 03 | 01 |
| 7 | ಊರುಭಂಗ | 03 | 02 |
| 8 | ಹರಲೀಲೆ | 03 | 02 |
| | ಗದ್ಯ ಒಟ್ಟು | 28 | 13 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಹೊಸಹಾಡು | 03 | 02 |
| 2 | ಪಾರಿವಾಳ | 05 | 02 |
| 3 | ಸಿರಿಯನಿನ್ನೇನ ಬಣ್ಣಿಪೆನು | 03 | 01 |
| 4 | ನಿಯತಿಯನಾರ್ ಮೀರಿದಪರ್ | 03 | 01 |
| 5 | ಮರಳಿ ಮನೆಗೆ | 04 | 02 |
| 6 | ತತ್ತ್ವಪದಗಳು | 04 | 01 |
| 7 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | 04 | 01 |
| 8 | ಕನ್ನಡ ನಾಡು ನುಡಿ | 04 | 01 |
| | ಪದ್ಯ ಒಟ್ಟು | 30 | 11 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಗುಣಸಾಗರಿ ಪಂಢರೀಬಾಯಿ | 02 | 01 |
| 2 | ರಂಜಾನ್ ಸುರಕುಂಬಾ ಮತ್ತು ಸಂಭ್ರಮದ ಜೋಕಾಲಿ | 02 | 01 |
| 3 | ನನ್ನಾಸೆ | 02 | 01 |
| 4 | ಉರಿದ ಬದುಕು | 02 | 01 |
| 5 | ಪುಟ್ಟಹಕ್ಕಿ | 01 | 01 |
| | ಪದ್ಯ ಒಟ್ಟು | 09 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 04 | 01 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 10 | 10 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 05 | 01 |
| 6 | ಪ್ರಬಂಧ ಲೇಖನ | 05 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 | 15 |

## ಹಂತ : 5(ಎ) 9 ನೆಯ ತರಗತಿ – ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಕನ್ನಡ ಮೌಲ್ವಿ | ** | 1(1) | 1(3) | ** | ** | ** | ** | ** | ** | ** | | ** | ** | ** | ** | 1(1) | ** | 1(3) | ** | ** | 04 | 02 |
| 2 | ಬೆಡಗಿನ ತಾಣ ಜಯಪುರ | ** | 1(1) | ** | ** | ** | ** | 1(2) | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 3 | ಧರ್ಮಸಮದೃಷ್ಟಿ | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 4 | ಆ. ಶಿ. ಸ. ರಾಧಾಕೃಷ್ಣನ್ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 5 | ಪ್ರಜಾನಿಷ್ಠೆ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 6 | ಜನಪದ ಕಲೆಗಳ ವೈಭವ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 7 | ಊರುಭಂಗ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 8 | ಹರಲೀಲೆ | ** | ** | ** | ** | ** | 1(1) | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| | **ಗದ್ಯ ಒಟ್ಟು** | ** | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಹೊಸಹಾಡು | ** | ** | ** | ** | ** | 1(1) | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಪಾರಿವಾಳ | ** | ** | ** | ** | ** | ** | 1(2) | ** | ** | ** | 1(3) | ** | ** | ** | ** | ** | 1(2) | 1(3) | ** | ** | 05 | 02 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ನಿಯತಿಯನಾರ್ ಮೀರಿದಪರ್ | ** | ** | 1(3) | ** | ** | ** | ** | ** | ** | ** | ** | ** | ** | ** | ** | ** | ** | 1(3) | ** | ** | 03 | 01 |
| 5 | ಮರಳಿ ಮನೆಗೆ | ** | 1(1) | ** | ** | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | ** | ** | 04 | 02 |
| 6 | ತತ್ವಪದಗಳು | ** | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | ** | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 8 | ಕನ್ನಡ ನಾಡು ನುಡಿ | ** | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | ** | 1(4) | ** | 04 | 01 |
| | **ಪದ್ಯ ಒಟ್ಟು** | ** | **1(1)** | **1(3)** | **1(4)** | ** | **1(1)** | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಗುಣಸಾಗರಿ ಪಂಢರೀಬಾಯಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 2 | ರಂಜಾನ್ ಸುರಕುಂಬಾ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ನನ್ನಾಸೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ಉರಿದ ಬದುಕು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 5 | ಪುಟ್ಟಹಕ್ಕಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |

**ಹಂತ : 5(ಎ)** **9 ನೆಯ ತರಗತಿ – ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ – ಪ್ರಥಮ ಭಾಷೆ ಕನ್ನಡ – ನೀಲ ನಕಾಶೆ.**

**ವ್ಯಾಕರಣಾಂಶಗಳು, ಛಂದಸ್ಸು, ಅಲಂಕಾರ, ವಾಕ್ಯರಚನೆಗಳು.**

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕಣಾಂಶಗಳು | **6(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **6(1)** | ** | ** | ** | **4(1)** | ** | ** | **2(3)** | ** | ** | **1(3)** | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **6(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **14 – 21** | | | | **19 – 36** | | | | | **11 – 39** | | | | **01 – 04** | **45 – 100** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

### 9 ನೆಯ ತರಗತಿ

### ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆ

**ವಿಷಯ ; ಪ್ರಥಮ ಭಾಷೆ ಕನ್ನಡ** **ವಿಷಯ ಸಂಕೇತ : 01K**
**ಸಮಯ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. ಈ ಕೆಳಗೆ ನೀಡಿರುವ ಪದಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಇವನೊಬ್ಬ (ಬಿ) ಹುಲಿಯಿಂದ
   (ಸಿ) ಗುರುವನ್ನು (ಡಿ) ಹುಲಿದೊಗಲು
2. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ಕರ್ಮಧಾರಯ (ಬಿ) ದ್ವಿಗು
   (ಸಿ) ತತ್ಪುರುಷ (ಡಿ) ಕ್ರಿಯಾ
3. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   (ಎ) ಸವರ್ಣದೀರ್ಘ (ಬಿ) ಗುಣ
   (ಸಿ) ವೃದ್ಧಿ (ಡಿ) ಯಣ್
4. 'ಸಂಪ್ರದಾನ' ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ;
   (ಎ) ಚತುರ್ಥಿ (ಬಿ) ತೃತೀಯ
   (ಸಿ) ಸಪ್ತಮಿ (ಡಿ) ಪಂಚಮಿ
5. ಇವುಗಳಲ್ಲಿ ಅಕರ್ಮಕ ಧಾತುವಿಗೆ ಉದಾಹರಣೆಯಾದದ್ದು;
   (ಎ) ಹೊಳೆ (ಬಿ) ಓದು
   (ಸಿ) ನೆಡು (ಡಿ) ಬೆಳೆ
6. 'ಹೋದನು' ಕ್ರಿಯಾಪದವು ಈ ಕಾಲರೂಪದಲ್ಲಿದೆ;
   (ಎ) ವರ್ತಮಾನ (ಬಿ) ಭೂತ
   (ಸಿ) ಭವಿಷ್ಯತ್ (ಡಿ) ಭೂತಭವಿಷ್ಯ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** . **4*1=4**

7. ನಿತ್ಯ : ಅನಿತ್ಯ : : ಸತ್ಯ : ..................
8. ಅವನಿ : ಭೂಮಿ : : ಎಕ್ಕಲ : ..........................................
9. ಸಕ್ಕದ : ಸಂಸ್ಕೃತ : : ಸತ್ತಿಗೆ : ..............................................
10. ಷಟ್ಪದಿ : ಆರು ಪಾದಗಳು : : ಕಂದ ಪದ್ಯ : ..................................................

**III. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** . **7*1=7**

11. ಜಯಪುರದಲ್ಲಿರುವ ಹಳೆಯ ಕಾಲದ ಖಗೋಳ ವಿಜ್ಞಾನ ಪರಿಶೀಲನಾಲಯದ ಹೆಸರೇನು?
12. ಗೊರೂರು ರಾಮಸ್ವಾಮಿ ಅವರ ಪ್ರಕಾರ ಮೌಲ್ವಿ ಹಿಡಿದಿದ್ದ ಪುಸ್ತಕದ ಹೆಸರೇನು?
13. ದುರ್ಯೋಧನನು ದುರ್ಜಯನಿಗೆ ಏನೆಂದು ಬುದ್ಧಿವಾದ ಹೇಳಿದನು?

14. ಶಿವನು ಗಿರಿಜೆಯನ್ನು ಕುರಿತು "ನನ್ನೊಡನೆ ಬರುವುದು ಬೇಡ" ಎಂದು ಹೇಳಲು ಕಾರಣವೇನು?
15. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ವೀರಧ್ವನಿ ಹೇಗೆ ಏರಬೇಕು?
16. ಕವಿ ಅರವಿಂದ ಮಾಲಗತ್ತಿ ಅವರ ಪ್ರಕಾರ ಮನೆಯ ಬಾಗಿಲು ಯಾರಿಗಾಗಿ ತೆರೆದಿಹುದು?
17. ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಯಾರನ್ನು ಸ್ವಾಗತಿಸುತ್ತದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . 10*2=20**

18. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?
19. 'ಹರಲೀಲೆ' ಪಾಠದಲ್ಲಿ ಹರಿಹರನು ವೃದ್ಧ ಮಹೇಶ್ವರನನ್ನು ಹೇಗೆ ವರ್ಣಿಸಿದ್ದಾನೆ?
20. ದುರ್ಯೋಧನನು "ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ" ಎನ್ನುವುದನ್ನು ಹೇಗೆ ಸಮರ್ಥಿಸಿದ್ದಾನೆ?
21. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರು "ಈ ಹಾಡು ಹೊಸಹಾಡು" ಎಂದು ಹೇಳಲು ಕಾರಣವೇನು?
22. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಹೇಗೆ ಕ್ರಮಕೈಗೊಂಡನು?
23. ಕವಿ ಸು. ರಂ. ಎಕ್ಕುಂಡಿ ಅವರ ಪ್ರಕಾರ ಪಾರಿವಾಳಗಳ ಆನಂದಕ್ಕೆ ಕಾರಣವೇನು?
24. ಲೇಖಕಿ ಕೆ. ನೀಲಾ ಅವರ ಪ್ರಕಾರ ನಾಗರ ಪಂಚಮಿಯ ದಿನ ಬಸವ ಕೇಂದ್ರದವರು ಹೇಗೆ ಜನರನ್ನು ಜಾಗೃತಿಗೊಳಿಸುತ್ತಿದ್ದರು?
25. ಕವಯಿತ್ರಿ ಇಂದುಮತಿ ಲಮಾಣಿ ಅವರು ತಮ್ಮ ಆಸೆಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ?
26. ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
27. ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಗೆ ವಿವರಿಸುತ್ತಾನೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. . 2*3=6**

28. ಗೊರೂರು ರಾಮಸ್ವಾಮಿ ಅಯ್ಯಂಗಾರ್

29. ಜನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. . 1*3=3**

30. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. . 1*3=3**

31. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. . 1*3=3**

32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

**ಅಥವಾ**

ಹಿತ್ತಲ ಗಿಡ ಮದ್ದಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . 6*3=18**

33. "ಚಾವಡಿಗಳು ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ."
34. "ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ"
35. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಧರ್ಮ."
36. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ದಿ"
37. "ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು"
38. "ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . 1*4=4**

39. ಪದನರಿದು ......................

........................................................................

..............................................

.................................................. ಮತಿಗಳ್

**ಅಥವಾ**

ಮಲ್ಲಿಗೆ ..................................

........................................................................

..............................................

.................................................. ನಾಡೊಳ್

**XI. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. 1*4=4**

**40.** ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿ ಜನ್ಮಕ ಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿ ಬೇಡ ॥

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

41. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.

**ಅಥವಾ**

ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಮಾನದ ಬಗ್ಗೆ ವಿವರಿಸಿ.

42. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ವಿವರಿಸಿ.

**ಅಥವಾ**

ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿಬರೆಯಿರಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

**43.** ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪುಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಗೀಜುಗವು ಕುಲಾವಿಯಾಕಾರದ ಆಕರ್ಷಕವಾದ ಗೂಡುಗಳನ್ನು ನೇಯುತ್ತದೆ. ಗೂಡು ಕಟ್ಟುವಾಗ, ಸ್ಥಳ ಆಯ್ಕೆ ಮಾಡುವಾಗ ಗೀಜುಗ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡು ಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು

ಕಟ್ಟುತ್ತವೆ. ಆದರೆ ನೆಲಮಟ್ಟದಲ್ಲಿ ಹಾಗೆ ಗೂಡು ಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರೂ ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು, ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ.

**ಪ್ರಶ್ನೆಗಳು :**

43. ಅ) ಗೀಜುಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು?

43. ಬ) ಗುಬ್ಬಚ್ಚಿಗೂ ಗೀಜುಗನಿಗೂ ಇರುವ ವ್ಯತ್ಯಾಸಗಳೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*5=5**

**44.** ನಿಮ್ಮನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸುರಭಿ' ಎಂದು ಭಾವಿಸಿಕೊಂಡು, ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಹೆಗ್ಗಡದೇವನಕೋಟೆ ತಾಲೂಕಿನ ತಹಶೀಲ್ದಾರರವರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನವೀನ್' ಎಂದು ಭಾವಿಸಿಕೊಂಡು ಬೆಂಗಳೂರಿನ ಕೃಷ್ಣರಾಜಪುರಂನಲ್ಲಿ ವಾಸವಾಗಿರುವ ನಿಮ್ಮ ಗೆಳೆಯ 'ಚಂದನ್' ಎನ್ನುವವನಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಸಂಭ್ರಮವನ್ನು ಕುರಿತು ಪತ್ರ ಬರೆಯಿರಿ

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.** .
**1*5=5**

**45.** ಸಾವಯವ ಕೃಷಿ

**ಅಥವಾ**

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು.

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ

## 9 ನೆಯ ತರಗತಿ

## ಪ್ರಥಮ ಭಾಷೆ ಕನ್ನಡ

**ವಿಷಯ ; ಪ್ರಥಮ ಭಾಷೆ ಕನ್ನಡ** — **ವಿಷಯ ಸಂಕೇತ : 01K**

**ಸಮಯ : 3 ಗಂಟೆ 15 ನಿಮಿಷ** — **ಗರಿಷ್ಠ ಅಂಕಗಳು : 100**

---

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6*1=6**

**(ಕ್ರಮಾಂಕದೊಂದಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ)**

1. ಈ ಕೆಳಗೆ ನೀಡಿರುವ ಪದಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಇವನೊಬ್ಬ (ಬಿ) ಹುಲಿಯಿಂದ
   (ಸಿ) ಗುರುವನ್ನು (ಡಿ) ಹುಲಿದೊಗಲು
   **ಉತ್ತರ : (ಡಿ) ಹುಲಿದೊಗಲು**
2. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ಕರ್ಮಧಾರಯ (ಬಿ) ದ್ವಿಗು
   (ಸಿ) ತತ್ಪುರುಷ (ಡಿ) ಕ್ರಿಯಾ
   **ಉತ್ತರ : (ಸಿ) ತತ್ಪುರುಷ**
3. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   (ಎ) ಸವರ್ಣದೀರ್ಘ (ಬಿ) ಗುಣ
   (ಸಿ) ವೃದ್ಧಿ (ಡಿ) ಯಣ್
   **ಉತ್ತರ : (ಬಿ) ಗುಣ**
4. 'ಸಂಪ್ರದಾನ' ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ;
   (ಎ) ಚತುರ್ಥಿ (ಬಿ) ತೃತೀಯ
   (ಸಿ) ಸಪ್ತಮಿ (ಡಿ) ಪಂಚಮಿ
   **ಉತ್ತರ : (ಎ) ಚತುರ್ಥಿ**
5. ಇವುಗಳಲ್ಲಿ ಅಕರ್ಮಕ ಧಾತುವಿಗೆ ಉದಾಹರಣೆಯಾದದ್ದು;
   (ಎ) ಹೊಳೆ (ಬಿ) ಓದು
   (ಸಿ) ನೆಡು (ಡಿ) ಬೆಳೆ
   **ಉತ್ತರ : (ಎ) ಹೊಳೆ**
6. 'ಹೋದನು' ಕ್ರಿಯಾಪದವು ಈ ಕಾಲರೂಪದಲ್ಲಿದೆ;
   (ಎ) ವರ್ತಮಾನ (ಬಿ) ಭೂತ
   (ಸಿ) ಭವಿಷ್ಯತ್ (ಡಿ) ಭೂತಭವಿಷ್ಯ
   **ಉತ್ತರ : (ಬಿ) ಭೂತ**

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. . **4*1=4**

**(ಪ್ರತಿ ಸರಿ ಉತ್ತರಕ್ಕೆ 1 ಅಂಕ)**

**7.** ನಿತ್ಯ : ಅನಿತ್ಯ : : ಸತ್ಯ : **ಅಸತ್ಯ**
**8.** ಅವನಿ : ಭೂಮಿ : : ಎಕ್ಕಲ : **ಹಂದಿ**
**9.** ಸಕ್ಕದ : ಸಂಸ್ಕೃತ : : ಸತ್ತಿಗೆ : **ಛತ್ರಿಕಾ**
**10.** ಷಟ್ಪದಿ : ಆರು ಪಾದಗಳು : : ಕಂದ ಪದ್ಯ : **ನಾಲ್ಕು ಪಾದಗಳು**

**III.** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. . **7*1=7**

**(ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**

11. ಜಯಪುರದಲ್ಲಿರುವ ಹಳೆಯ ಕಾಲದ ಖಗೋಳ ವಿಜ್ಞಾನ ಪರಿಶೀಲನಾಲಯದ ಹೆಸರೇನು?
**'ಜಂತ್ರ ಮಂತ್ರ' ಎನ್ನುವುದು ಜಯಪುರದಲ್ಲಿರುವ ಹಳೆಯ ಕಾಲದ ಖಗೋಳ ವಿಜ್ಞಾನ ಪರಿಶೀಲನಾಲಯದ ಹೆಸರಾಗಿದೆ.**
12. ಗೊರೂರು ರಾಮಸ್ವಾಮಿ ಅವರ ಪ್ರಕಾರ ಮೌಲ್ವಿ ಹಿಡಿದಿದ್ದ ಪುಸ್ತಕದ ಹೆಸರೇನು?
**ಗೊರೂರು ರಾಮಸ್ವಾಮಿ ಅವರ ಪ್ರಕಾರ ಮೌಲ್ವಿ ಹಿಡಿದಿದ್ದ ಪುಸ್ತಕದ ಹೆಸರು 'ಕುಮಾರ ವ್ಯಾಸ ಭಾರತ'.**
13. ದುರ್ಯೋಧನನು ದುರ್ಜಯನಿಗೆ ಏನೆಂದು ಬುದ್ಧಿವಾದ ಹೇಳಿದನು?
**"ಪಾಂಡವರಿಗೆ ವಿಧೇಯನಾಗಿರು, ಅಜ್ಜಿ ಕುಂತಿಯ ಆಜ್ಞೆ ಪ್ರಕಾರ ನಡೆದುಕೋ, ಅಭಿಮನ್ಯುವಿನ ತಾಯಿ, ದ್ರೌಪದಿ ಇಬ್ಬರನ್ನು ತಾಯಿಯಂತೆ ಪೂಜಿಸು" ಎಂದು ದುರ್ಯೋಧನನು ದುರ್ಜಯನಿಗೆ ಬುದ್ಧಿವಾದ ಹೇಳಿದನು.**
14. ಶಿವನು ಗಿರಿಜೆಯನ್ನು ಕುರಿತು "ನನ್ನೊಡನೆ ಬರುವುದು ಬೇಡ" ಎಂದು ಹೇಳಲು ಕಾರಣವೇನು?
**ಶಿವನು ಗಿರಿಜೆಯನ್ನು ಕುರಿತು "ನೀನು ಅತಿ ಕರುಣಿ, ನಾವು ಮಾಡುವುದು ಅತ್ಯಂತ ನಿಷ್ಠುರದ ಕಾರ್ಯ" ಆದ್ದರಿಂದ ನನ್ನೊಡನೆ ಬರುವುದು ಬೇಡ ಎಂದು ಹೇಳುತ್ತಾನೆ.**
15. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ವೀರಧ್ವನಿ ಹೇಗೆ ಏರಬೇಕು?
**ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ವೀರಧ್ವನಿ ತೀವ್ರತರವಾಗಿ ಗಂಭೀರ ಭಾವನೆಯ ತೆರೆಯು ಹರಡುವಂತೆ ಏರಬೇಕು.**
16. ಕವಿ ಅರವಿಂದ ಮಾಲಗತ್ತಿ ಅವರ ಪ್ರಕಾರ ಮನೆಯ ಬಾಗಿಲು ಯಾರಿಗಾಗಿ ತೆರೆದಿಹುದು?
**ಕವಿ ಅರವಿಂದ ಮಾಲಗತ್ತಿ ಅವರ ಪ್ರಕಾರ ಮನೆಯ ಬಾಗಿಲು ಬುದ್ಧನಿಗಾಗಿ ತೆರೆದಿಹುದು.**
17. ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಯಾರನ್ನು ಸ್ವಾಗತಿಸುತ್ತದೆ?
**ಪುಟ್ಟಹಕ್ಕಿಯು ಗೀತೆಯನ್ನು ಹಾಡುತ್ತಾ ಸೂರ್ಯನನ್ನು ಸ್ವಾಗತಿಸುತ್ತದೆ.**

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. . **10*2=20**

**(ಉತ್ತರದ ಅಂಶಗಳನ್ನಾದರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

18. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?
**'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ (ನಾಸ್ತಿಕ) ಸಾಗರ ಮಹಾಬಡಬಾ ಮುಖಾಗ್ನಿಯಂತಿರುವವರು, ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲ ದಾಸರಾದವರು, ಶ್ರೀವಿಷ್ಣುಲೋಕ ಮುನಿಮಂಟಪ ಮಾರ್ಗದಾಯಿಗಳು, ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ.**
19. 'ಹರಲೀಲೆ' ಪಾಠದಲ್ಲಿ ಹರಿಹರನು ವೃದ್ಧ ಮಹೇಶ್ವರನನ್ನು ಹೇಗೆ ವರ್ಣಿಸಿದ್ದಾನೆ?
**ಪಾರ್ವತಿಯು ನೋಡುನೋಡುತ್ತಿದ್ದಂತೆ ಶತಾಯುಷಿ ವೃದ್ಧನ ವೇಷ ಧರಿಸಿದ ಮಹೇಶ್ವರನು ಆಪಾದ ಮಸ್ತಕದವರೆಗೂ ವಿಭೂತಿಯನ್ನು ಧರಿಸಿ, ನರೆತೆರೆಗಳುಳ್ಳ ತಲೆ ಹಾಗೂ ಮೈಯನ್ನು ಹೊಂದಿದ್ದನು. ಜಡೆಯಲ್ಲಿದ್ದ ಚಂದ್ರಕಳೆಯೇ ಕೊಡೆಯಾಗಿ, ಹಿಡಿದ ತ್ರಿಶೂಲವು ಕೊಡೆಯ ಕಾವಾಗಿತ್ತು. ತುದಿಯಲ್ಲಿ ತಲೆ ಬುರುಡೆಯುಳ್ಳ ಗದೆಯೇ ಕೈಯಲ್ಲಿ ಹಿಡಿದ ಕೋಲಾಗಿತ್ತು. ಆಭರಣವಾಗಿದ್ದ ಒಂದು ಸರ್ಪವು ಪ್ರಮಾಣಪತ್ರವಾಗಿತ್ತು. ಬ್ರಹ್ಮನ ಶಿರವು ಕಮಂಡಲವಾಗಿ, ಹುಲಿಯ ಚರ್ಮ ಹಾಗೂ ಗಜ ಚರ್ಮಗಳು ಉಟ್ಟ ಹೊದೆದ ಪಂಚೆಗಳಾಗಿದ್ದವು. ಕಟ್ಟಿದ ಶಿರೋಮಾಲೆಯು ಜಪಮಾಲೆಯಾಗಿತ್ತು ಎಂದು ಕವಿಯು ವೃದ್ಧ ಮಾಹೇಶ್ವರನ ವೇಷ ಧರಿಸಿದ ಶಿವನನ್ನು ವರ್ಣನೆ ಮಾಡುತ್ತಾನೆ.**
20. ದುರ್ಯೋಧನನು "ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ" ಎನ್ನುವುದನ್ನು ಹೇಗೆ ಸಮರ್ಥಿಸಿದ್ದಾನೆ?
**ದುರ್ಯೋಧನನು "ರಾಜರಿಗೆ ಅಭಿಮಾನವೇ ಶರೀರ, ಆ ಅಭಿಮಾನಕ್ಕಾಗಿಯೇ ನಾನು ಯುದ್ಧವನ್ನು ಕೈಗೊಂಡಿದ್ದು, ನೋಡು ಗುರುಪುತ್ರ, ಸಭೆಯಲ್ಲಿ ದ್ರೌಪದಿಯನ್ನು ಮುಂದಲೆವಿಡಿದು ಎಳೆದಾಡಿದೆವು. ಪಗಡೆ ಆಟದ ನೆಪದಲ್ಲಿ ಸೋತ ಪಾಂಡವರನ್ನು ವನ್ಯಮೃಗಗಳ ಒಡಗೂಡಿಸಿ ಕಾಡಿನಲ್ಲಿ ತಿರ್ರನೆ ತಿರುಗಾಡಿಸಿದೆವು. ಇವುಗಳ ಮುಂದೆ ಪಾಂಡವರು ನನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪವಲ್ಲವೇ? ಆಲೋಚಿಸಿ ನೋಡು" ಎನ್ನುವುದರ ಮೂಲಕ ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ ಎಂಬುದನ್ನು ಸಮರ್ಥಿಸಿದ್ದಾನೆ.**

21. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರು "ಈ ಹಾಡು ಹೊಸಹಾಡು" ಎಂದು ಹೇಳಲು ಕಾರಣವೇನು?
**ಕವಿ ಕಯ್ಯಾರ ಕಿಞ್ಞಣ್ಣ ರೈ ಅವರು "ಭೂಮಿಯ ಅಂತರಾಳದಲ್ಲಿ ಆಕಾಶ ಚಕ್ರಗೋಳದಲ್ಲಿ ಗಂಡೆದೆಯ ಗರ್ಜನೆಯ, ಮೂವತ್ತಮೂರು ಕೋಟಿ ಜನರ ಇಂಪಾದ ಧ್ವನಿ ಬೆರೆತ ಹಾಡಿನ ಮಾರ್ದನಿಗಳೇಳಬೇಕು ನಡತೆ ಮಾತುಗಳ ಎಡೆಯಲ್ಲಿ ಪಾದಗಳ ನಡಿಗೆಯಲ್ಲಿ ಕ್ರಾಂತಿಯ ಕಿಡಿಯು ಕೆರಳಬೇಕು ಮುಂಚಿನ ಹಾಡು ಈಗಿಲ್ಲ. ಇದು ವೀರತನದ ಭರವಸೆ ಹಾಡು. ಆದ್ದರಿಂದ ಇದು ಹೊಸತಾಗಿದೆ" ಎಂದು ಹೇಳಿದ್ದಾರೆ.**

22. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಹೇಗೆ ಕ್ರಮಕೈಗೊಂಡನು?
**ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ನೇಮಿಸಿ, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು" ಎಂದು ಶಾಸನ ಬರೆಸಿದನು.**

23. ಕವಿ ಸು. ರಂ. ಎಕ್ಕುಂಡಿ ಅವರ ಪ್ರಕಾರ ಪಾರಿವಾಳಗಳ ಆನಂದಕ್ಕೆ ಕಾರಣವೇನು?
**ಕವಿ ಸು. ರಂ. ಎಕ್ಕುಂಡಿ ಅವರ ಪ್ರಕಾರ 'ದಟ್ಟ ಕಾಡಿನಲ್ಲಿದ್ದ ಒಂದು ಹೆಮ್ಮರದ ಪೊಟರೆಯಲ್ಲಿ ಮುದ್ದು ಬಿಳಿ ಪಾರಿವಾಳಗಳ ಜೋಡಿ ಪ್ರೀತಿಯಿಂದ ಜೀವನ ನಡೆಸುತ್ತಿದ್ದವು. ಅವು ಮರದ ಪೊಟರೆಯಲ್ಲಿ ಮೊಟ್ಟೆ ಇಟ್ಟವು. ಆ ಮೊಟ್ಟೆಯೊಡೆದು ಮರಿಗಳು ಹೊರಬಂದವು. ಆ ಮುದ್ದು ಮರಿಗಳ ಮಧುರ ಸದ್ದು ಕೇಳಿ ಪಾರಿವಾಳಗಳು ಆನಂದಿಸಿದವು."**

24. ಲೇಖಕಿ ಕೆ. ನೀಲಾ ಅವರ ಪ್ರಕಾರ ನಾಗರ ಪಂಚಮಿಯ ದಿನ ಬಸವ ಕೇಂದ್ರದವರು ಹೇಗೆ ಜನರನ್ನು ಜಾಗೃತಿಗೊಳಿಸುತ್ತಿದ್ದರು?
**ಲೇಖಕಿ ಕೆ. ನೀಲಾ ಅವರ ಪ್ರಕಾರ ಬಸವಕೇಂದ್ರದವರು ನಾಗರ ಪಂಚಮಿಯ ದಿನ ಮೈಕಿನಲ್ಲಿ "ಕಲ್ಲ ನಾಗರ ಕಂಡರೆ ಹಾಲನೆರೆ ಎಂಬುವರಯ್ಯಾ; ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯಾ ಎನ್ನುವ ಬಸವಣ್ಣನವರ ವಚನದ ಮಹತ್ತ್ವವನ್ನು ತಿಳಿಸಿ, ಹುತ್ತಕ್ಕೆ ಸುರಿದ ಹಾಲನ್ನು ಹಾವು ಕುಡಿಯುವುದಿಲ್ಲ. ಆದ್ದರಿಂದ ಹುತ್ತಕ್ಕೆ ಹಾಲನ್ನು ಎರೆಯಬೇಡಿ." ಎಂದು ಹೇಳಿ ಜಾಗೃತಿ ಮೂಡಿಸುತ್ತಿದ್ದರು.**

25. ಕವಯಿತ್ರಿ ಇಂದುಮತಿ ಲಮಾಣಿ ಅವರು ತಮ್ಮ ಆಸೆಗಳನ್ನು ಹೇಗೆ ವ್ಯಕ್ತಪಡಿಸಿದ್ದಾರೆ?
**ಕವಯಿತ್ರಿ ಇಂದುಮತಿ ಲಮಾಣಿ ಅವರು "ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ನೆರಳಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯ ಕೈಯ ಗ್ರಂಥ, ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಆಗಬೇಕು" ಎಂದು ತಮ್ಮ ಆಸೆಗಳನ್ನು ವ್ಯಕ್ತಪಡಿಸಿದ್ದಾರೆ.**

26. ಪಂಡರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
**ಪಂಡರೀಬಾಯಿ ಅವರ ಅಣ್ಣ ವಿಮಲಾನಂದ ಅವರು ನಾಟಕ ಕಂಪನಿಯನ್ನು ನಡೆಸುತ್ತಿದ್ದರು. ಒಂದು ದಿನ ಆ ನಾಟಕ ಕಂಪನಿಯಲ್ಲಿ ಪಾತ್ರ ನಿರ್ವಹಣೆಯನ್ನು ಮಾಡುತ್ತಿದ್ದ ಕಲಾವಿದೆಯೊಬ್ಬಳು ನಾಟಕ ಪ್ರಾರಂಭವಾಗುವುದಕ್ಕೆ ಅರ್ಧಗಂಟೆ ಬಾಕಿ ಇರುವಾಗ ಬರುವುದಿಲ್ಲ ಎಂದು ಹೇಳಿದಳು. ಇದರಿಂದ ಕಂಪನಿಯ ಮಾಲೀಕನಾದ ಅಣ್ಣ ವಿಮಲಾನಂದ ಚಿಂತಾಕ್ರಾಂತನಾದನು. ತನ್ನ ಅಣ್ಣನ ಕಂಪನಿಯ ನಾಟಕವು ನಿಲ್ಲಬಾರದು ಎನ್ನುವ ಕಾರಣದಿಂದ ಪಂಢರೀಬಾಯಿ ಅವರು ನಾಟಕದಲ್ಲಿ ಬಣ್ಣ ಹಚ್ಚಬೇಕಾಯಿತು.**

27. ದುರ್ಗಪ್ಪನು ಶಂಕಣ್ಣನಿಗೆ ಕುಲದ ಬಗೆಗೆ ಹೇಗೆ ವಿವರಿಸುತ್ತಾನೆ?
**ದುರ್ಗಪ್ಪ ಶಂಕರಣ್ಣನಿಗೆ "ಕುಡಿ ತಮ್ಮಾ, ಜೀವ ಬದುಕ್ಲಿ ಮೊದ್ಲು, ಜೀವಕ್ಕ ಯಾವ್ ಕುಲಾನೂ ಇಲ್ಲ. ಗಾಳಿಗೆ ಕುಲಾ ಅದೇನು ತಮ್ಮಾ, ನೀರಿಗೆ ಕುಲಾ ಅದೇನು ತಮ್ಮಾ, ನೆಲಕ್ಕ ಕುಲಾ ಅದೇನು? ಅದು ನಾವು ಮಾಡಿಕೊಂಡದ್ದು, ಕುಡಿ" ಎಂದು ಕುಲದ ಬಗೆಗೆ ನೀತಿ ಮಾತುಗಳನ್ನು ಹೇಳಿದನು.**

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** . **2*3=6**

| | |
|---|---|
| ಜನ್ಮಸ್ಥಳ ಮತ್ತು ಕಾಲ | = 1 ಅಂಕ |
| ಕೃತಿಗಳು ಮತ್ತು ಪ್ರಶಸ್ತಿಗಳು | = 1 ಅಂಕ |
| ವಾಕ್ಯರೂಪದ ವಿವರಣೆಗೆ ಮತ್ತು ಭಾಷಾ ಶೈಲಿಗೆ | = 1 ಅಂಕ |
| ಒಟ್ಟು | = 3 ಅಂಕಗಳು |

28. ಗೊರೂರು ರಾಮಸ್ವಾಮಿ ಅಯ್ಯಂಗಾರ್

**ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕ್ರಿ. ಶ. 1904 ರಲ್ಲಿ ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಕನ್ನಡ ನವೋದಯ ಕಾಲದ ಗದ್ಯಪ್ರಕಾರದ ಪ್ರಮುಖ ಲೇಖಕರಾದ ಇವರು ಕನ್ಯಾಕುಮಾರಿ ಮತ್ತು ಇತರ ಕಥೆಗಳು, ನಮ್ಮ ಊರಿನ ರಸಿಕರು, ಗರುಡಗಂಬದ ದಾಸಯ್ಯ, ಮೆರೆವಣಿಗೆ, ಹೇಮಾವತಿ ತೀರದಲ್ಲಿ, ಪುನರ್ಜನ್ಮ, ಅಮೆರಿಕದಲ್ಲಿ ಗೊರೂರು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.**

29. ಜನ್ನ

**ಶ್ರೀ ಜನ್ನ ಅವರು ಕ್ರಿ. ಶ. ಸುಮಾರು 13 ನೇ ಶತಮಾನದ ಪೂರ್ವಾರ್ಧದಲ್ಲಿ ಹಳೇಬೀಡು ಪ್ರಾಂತ್ಯದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಶಂಕರ, ತಾಯಿಯ ಹೆಸರು ಗಂಗಾದೇವಿ, ಇವರು ಯಶೋಧರ ಚರಿತೆ, ಅನಂತನಾಥ ಪುರಾಣ, ಅನುಭವ ಮುಕುರ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಹೊಯ್ಸಳ ಬಲ್ಲಾಳ ಅವರು 'ಕವಿ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಇವರು ಜೈನ ಧರ್ಮದ ತಿರುಳಾದ ಅಹಿಂಸೆಯ ಸಂದೇಶವನ್ನು ಜಗತ್ತಿಗೆ ಸಾರುವ ಉದ್ದೇಶದಿಂದ 'ಯಶೋಧರ ಚರಿತೆ' ಎಂಬ ಪುಟ್ಟ ಕಾವ್ಯವನ್ನು ಬಹುಸುಂದರವಾಗಿ ರಚಿಸಿದ್ದಾರೆ.**

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** . **1*3=3**

| | |
|---|---|
| ಪ್ರಸ್ತಾರ ಹಾಕುವುದು | = 1 ಅಂಕ |
| ಗಣ ವಿಭಾಗಿಸುವುದು | = 1 ಅಂಕ |
| ಛಂದಸ್ಸಿನ ಹೆಸರು ಬರೆಯುವುದು | = 1 ಅಂಕ |
| ಒಟ್ಟು | = 3 ಅಂಕಗಳು |

30. ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ

| | | | |
|---|---|---|---|
| 3 | 4 | 3 | 4 |
| ∪∪∪ | — ∪ ∪ | — ∪ | — ∪ ∪ |
| ಸುಲಿದ | ಬಾಳೆಯ | ಹಣ್ಣಿ | ನಂದದಿ |

| | | | |
|---|---|---|---|
| 3 | 4 | 3 | 4 |
| ∪∪∪ | ∪∪∪ ∪ | — ∪ | — ∪ ∪ |
| ಕಳಿದ | ಸಿಗುರಿನ | ಕಬ್ಬಿ | ನಂದದಿ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗು |
| ∪∪∪ | — ∪ ∪ | — ∪ | — ∪∪ | ∪ ∪ ∪ | — — | — |
| ಅಳಿದ | ಉಷ್ಣದ | ಹಾಲಿ | ನಂದದಿ | ಸುಲಭ | ವಾಗಿ | ರ್ಪ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. . **1*3=3**

| | |
|---|---|
| ಅಲಂಕಾರದ ಹೆಸರು ಬರೆಯುವುದು | = 1 ಅಂಕ |
| ಲಕ್ಷಣ ಬರೆಯುವುದು | = 1 ಅಂಕ |
| ಸಮನ್ವಯ ಮಾಡುವುದು | = 1 ಅಂಕ |
| ಒಟ್ಟು | = 3 ಅಂಕಗಳು |

31. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.

| | | |
|---|---|---|
| ಅಲಂಕಾರ | :– | ಉಪಮಾಲಂಕಾರ |
| ಲಕ್ಷಣ | :– | ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು. |
| ಉಪಮೇಯ | :– | ಗೀಜಗನ ಗೂಡುಗಳು |
| ಉಪಮಾನ | :– | ತೊಟ್ಟಿಲು |
| ಉಪಮಾ ವಾಚಕ | :– | ಅಂತೆ |
| ಸಮಾನ ಧರ್ಮ | :– | ತೂಗಾಡುವುದು |
| ಸಮನ್ವಯ | :– | ಇಲ್ಲಿ ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೊಟ್ಟಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾಕ್ಕೆ ಉದಾಹರಣೆಯಾಗಿದೆ. |

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. .

**1*3=3**

| | |
|---|---|
| ಗಾದೆಯ ಮಹತ್ತ್ವದ ವಿವರಣೆ | = 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | = 1 ಅಂಕ |
| ಪದಬಂಧ – ಭಾಷಾ ಶೈಲಿ | = 1 ಅಂಕ |
| ಒಟ್ಟು | = 3 ಅಂಕಗಳು |

32. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ 'ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನು?' ಎಂಬ ಗಾದೆಯೂ ಸಹ ಒಂದಾಗಿದೆ.

ಕೆಲವು ಸಲ ಅನಿರೀಕ್ಷಿತವಾಗಿ ಆಗಬೇಕಾದ ಕೆಲಸಕ್ಕೆ ಬದಲಾಗಿ ಇನ್ನೇನೋ ಆಗುವ ಸಂಭವವಿರುತ್ತದೆ. ಹಾಗಾದಾಗ ಅದಕ್ಕಾಗಿ ಯೋಚಿಸಿದರೆ, ತಲೆ ಕೆಡಿಸಿಕೊಂಡರೆ ಉಪಯೋಗವಿಲ್ಲವೆಂದು ಈ ಗಾದೆ ತಿಳಿಸುತ್ತದೆ. ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸದೆ ಮುಂದಿನ ಕಾರ್ಯದ ಬಗ್ಗೆ ಚಿಂತನೆ ಮಾಡುವುದು ಬುದ್ಧಿವಂತರ ಲಕ್ಷಣ. ಕೆಲವೊಮ್ಮೆ ನಮ್ಮ ತಪ್ಪಿನಿಂದ ಅಥವಾ ಪ್ರಕೃತಿಯ ವಿಕೋಪದಿಂದ ಆಗಬಾರದ್ದು ಆಗಿಬಿಡುತ್ತದೆ. ಅದಕ್ಕಾಗಿ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಅಂತಹ ಸಂದರ್ಭದಲ್ಲಿ ಅದನ್ನು ಧೈರ್ಯದಿಂದ ಎದುರಿಸಬೇಕು ಎಂಬುದು ಈ ಗಾದೆಯ ಅರ್ಥವಾಗಿದೆ.

ಅಥವಾ

ಹಿತ್ತಲ ಗಿಡ ಮದ್ದಲ್ಲ.

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯೂ ಸಹ ಒಂದಾಗಿದೆ.

ಯಾವುದು ನಮ್ಮ ಸನಿಹದಲ್ಲಿ ಇರುತ್ತದೆಯೋ ಅದರ ಮೌಲ್ಯ ನಮಗೆ ತಿಳಿಯುವುದಿಲ್ಲ ಎಂಬುದನ್ನು ಈ ಗಾದೆಯು ತಿಳಿಸುತ್ತದೆ. ನಮ್ಮ ರೋಗವನ್ನು ವಾಸಿ ಮಾಡಿಕೊಳ್ಳುವ ಮದ್ದಿನ ಗಿಡ ನಮ್ಮ ಮನೆಯ ಹಿತ್ತಲಿನಲ್ಲೇ ಇದ್ದರೂ, ನಾವು ಅದನ್ನು ಬಳಸದೇ ಬೇರೆ ಕಡೆ ಹೋಗಿ ಮದ್ದನ್ನು ತರುತ್ತವೆ. ಅದೇ ರೀತಿಯಲ್ಲಿ ನಮ್ಮ ಸಮಸ್ಯೆಗಳಿಗೆ, ಕಷ್ಟಗಳಿಗೆ ನಮ್ಮ ಮನೆಯಲ್ಲಿ ಇರುವವರೇ ಅಥವಾ ಹತ್ತಿರದವರೇ ಪರಿಹಾರಗಳನ್ನು ನೀಡಲು ಸಮರ್ಥರಿದ್ದರೂ ಅವರನ್ನು ಕಡೆಗಣಿಸಿ, ನಾವು ನಂಬದೇ ಬೇರೆಯವರ ಬಳಿಯಲ್ಲಿ ಪರಿಹಾರಕ್ಕಾಗಿ ಹಾತೊರೆಯುತ್ತೇವೆ. ಅಂದರೆ ನಮ್ಮ ಹತ್ತಿರದವರ ಮೇಲೆಯೇ ನಮಗೆ ನಂಬಿಕೆ ಇಲ್ಲ ಅಥವಾ ನಮ್ಮವರನ್ನೇ ನಾವು ನಂಬುವುದಿಲ್ಲ ಎಂಬುದು ಈ ಗಾದೆಯ ಅರ್ಥವಾಗಿದೆ.

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. . **6*3=18**

| | |
|---|---|
| ಕವಿ, ಆಕರ ಕೃತಿ ಮತ್ತು ಪಾಠದ ಹೆಸರು | = 1 ಅಂಕ |
| ಸಂದರ್ಭ ವಿವರಣೆ | = 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | = 1 ಅಂಕ |
| ಒಟ್ಟು | = 3 ಅಂಕಗಳು |

33. "ಜಾವಡಿಗಳು ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ."
ಆಯ್ಕೆ :– ಈ ವಾಕ್ಯವನ್ನು ಶ್ರೀ ಶಿವರಾಮ ಕಾರಂತ ಅವರು ಬರೆದಿರುವ 'ಅಬುವಿನಿಂದ ಬರಾಮಕ್ಕೆ' ಗ್ರಂಥದಿಂದ ಆಯ್ದ 'ಬೆಡಗಿನ ತಾಣ ಜಯಪುರ' ಎಂಬ ಪ್ರವಾಸ ಸಾಹಿತ್ಯದಿಂದ ಆರಿಸಲಾಗಿದೆ.
ಸಂದರ್ಭ :– ಅಂಬೇರ ಕೋಟೆಯ ಮೂರನೆಯ ಅಂತಸ್ತಿನಲ್ಲಿ ರಾಜರ ಅಂತಃಪುರ ಹಾಗೂ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳ ಸೊಬಗನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ :– ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ, ಅಲಂಕರಿಸಿದಂತಹ ಕಂಬ, ಮುಚ್ಚಿಕೆಗಳುಳ್ಳ ರಚನೆಗಳು ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ ಕಾಣುವ ಸೊಬಗನ್ನು ಲೇಖಕರು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

**34.** "ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ"
ಆಯ್ಕೆ :– ಪ್ರಸ್ತುತ ವಾಕ್ಯವನ್ನು ಮೈಸೂರು ವಿಶ್ವವಿದ್ಯಾನಿಲಯದ 'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ' ಅವರು ಪ್ರಕಟಿಸಿರುವ 'ಜಾನಪದ' ವಿಷಯ ವಿಶ್ವಕೋಶದಿಂದ ಆಯ್ದು, ಪಠ್ಯಪುಸ್ತಕ ರಚನಾ ಸಮಿತಿ ಅವರು ಸಂಗ್ರಹಿಸಿರುವ 'ಜನಪದ ಕಲೆಗಳ ವೈಭವ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ :– ಕಂಸಾಳೆ ಹಾಗೂ ಮಹದೇಶ್ವರನ ಮಹಿಮೆ ಅಪಾರ ಎಂದು ಭಾವಿಸುವ ದೇವರ ಗುಡ್ಡರು ಕಂಸಾಳೆಯನ್ನು ಪೂಜಿಸಿ, ನಮಸ್ಕರಿಸಿ, ಕಣ್ಣಿಗೆ ಒತ್ತಿಕೊಂಡು, ಕೈಗೆತ್ತಿಕೊಳ್ಳುವ ಮೊದಲು ಪ್ರಾರ್ಥಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಕಂಸಾಳೆ ವೃತ್ತಿ ಗಾಯಕರು ಕಂಸಾಳೆಯನ್ನು ಬಾರಿಸುವ ಮೊದಲು ಈ ರೀತಿಯ ಪ್ರಾರ್ಥನೆಯನ್ನು ಮಾಡುತ್ತಾರೆ ಎಂದು ಲೇಖಕರು ಹೇಳುತ್ತಾರೆ.
ಸ್ವಾರಸ್ಯ :– ಕಂಸಾಳೆ ಹಾಗೂ ಮಹದೇಶ್ವರನ ಮಹಿಮೆಯ ಬಗ್ಗೆ ದೇವರ ಗುಡ್ಡರಿಗೆ ಇರುವ ಗೌರವ ಭಾವನೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

35. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಧರ್ಮ."
ಆಯ್ಕೆ :– ಪ್ರಸ್ತುತ ವಾಕ್ಯವನ್ನು ಶ್ರೀಮತಿ ರತ್ನಮ್ಮ ಅವರ 'ಡಾ. ಎಸ್. ರಾಧಾಕೃಷ್ಣನ್ – ಜೀವನ ಸಾಧನೆ' ಹಾಗೂ ಎ. ಎನ್. ಮೂರ್ತಿರಾವ್ ಅವರ 'ಚಿತ್ರಗಳು–ಪತ್ರಗಳು ಕೃತಿಗಳಿಂದ ಆಯ್ದು, ಪಠ್ಯ ಪುಸ್ತಕ ಸಮಿತಿ ಅವರು ರಚಿಸಿದ 'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್' ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
ಸಂದರ್ಭ :– ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಹೇಳುತ್ತಾರೆ.
ಸ್ವಾರಸ್ಯ :– ರಾಧಾಕೃಷ್ಣನ್ ಅವರಲ್ಲಿ ಇದ್ದ ಮಾನವತೆಯ ಪ್ರೇಮ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

36. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

**ಆಯ್ಕೆ :–** ಈ ವಾಕ್ಯವನ್ನು ಸು. ರಂ. ಎಕ್ಕುಂಡಿ ಅವರ 'ಸಮಗ್ರ ಕಥನ ಕವನಗಳು' ಕೃತಿಯಿಂದ ಆಯ್ದ 'ಪಾರಿವಾಳ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದ ಪಾರಿವಾಳಗಳ ಸಂಸಾರ ಕುರುಡು ವಾತ್ಸಲ್ಯದಿಂದ ಬೇಡ ಬೀಸಿದ ಬಲೆಗೆ ಬೀಳುತ್ತದೆ. ಆ ಸಂದರ್ಭದಲ್ಲಿ ಕವಿ ಜೀವನದಲ್ಲಿ ಮೋಹಕ್ಕೆ ಒಳಗಾದಾಗ ಅದು ನಮ್ಮನ್ನು ಸರ್ವನಾಶದೆಡೆಗೆ ಕೊಂಡೊಯ್ಯುತ್ತದೆ ಎಂದು ಹೇಳುತ್ತಾರೆ.

**ಸ್ವಾರಸ್ಯ :–** ಈ ಮಾತಿನಲ್ಲಿ ವ್ಯಾಮೋಹವನ್ನು ತೊರೆದು ಬಾಳಬೇಕು. ಮೋಹಕ್ಕೆ ಒಳಗಾಗಬಾರದು ಎಂಬ ಕವಿಯ ಎಚ್ಚರಿಕೆಯ ಭಾವ ಅಭಿವ್ಯಕ್ತವಾಗಿದೆ.

37. "ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು"

**ಆಯ್ಕೆ :–** ಈ ವಾಕ್ಯವನ್ನು ಶ್ರೀ ರತ್ನಾಕರವರ್ಣಿ ಅವರು ರಚಿಸಿರುವ 'ಭರತೇಶ ವೈಭವ' ಕೃತಿಯಿಂದ ಆಯ್ದ 'ಸಿರಿಯನಿನ್ನೇನ ಬಣ್ಣಿಪೆನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಗುರುವೆ ಧ್ಯಾನ ಬೇಸರವಾದಾಗ ನಿನ್ನನ್ನು ಆಧಾರವಾಗಿಟ್ಟುಕೊಂಡು ಕನ್ನಡ ಭಾಷೆಯಲ್ಲಿ ಒಂದು ಕಥೆಯನ್ನು ಹೇಳುತ್ತೇನೆ ಎಂದು ಕವಿಯು ವಿಜ್ಞಾಪನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಕನ್ನಡಿಗರು 'ಅಯ್ಯಾ ನಿನ್ನ ಕೃತಿ ಚೆನ್ನಾಗಿದೆ' ಎನ್ನಬೇಕು. ತೆಲುಗರು 'ರಯ್ಯಾ ಮಂಚಿದಿ' ಎಂದೆನ್ನಬೇಕು. ತುಳುವರು ಸಂತೋಷದಿಂದ 'ಅಯ್ಯಾ ಎಂಚ ಪೋರ್ಲಾಂಡ್' ಎಂದು ಹೇಳಬೇಕು ಎಂದು ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೊಗಳಬೇಕೆಂದು ಕವಿಯು ಬಯಸುವನು.

38. "ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು"

**ಆಯ್ಕೆ :–** ಈ ವಾಕ್ಯವನ್ನು ಶ್ರೀ ಅರವಿಂದ ಮಾಲಗತ್ತಿ ಅವರು ರಚಿಸಿರುವ "ವಿಶ್ವತೋಮುಖ – ಹೂ ಬಲುಭಾರ" ಕವನ ಸಂಕಲನದಿಂದ ಆಯ್ದ 'ಮರಳಿ ಮನೆಗೆ' ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ :–** ಶ್ರೀ ಅರವಿಂದ ಮಾಲಗತ್ತಿ ಅವರು ಇಂದಿನ ಪ್ರಕ್ಷುಬ್ಧ ಸ್ಥಿತಿಗೆ ಬುದ್ಧನು ಮರಳಿ ಮನೆಗೆ ಬರಬೇಕಾದ ಅಗತ್ಯತೆಯನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಮಾನವರಲ್ಲಿ ಬುದ್ಧನ ಕರುಣಾಗುಣ ಹಾಗೂ ಬುದ್ಧನ ಅರಿವಿನ ಬೆಳಕು ಮೂಡಲಿ ಎನ್ನುವುದು ಈ ಮಾತಿನ ಸ್ವಾರಸ್ಯವಾಗಿದೆ.

**X.** ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ. . **1*4=4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

**39.** ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಗಳ್ ।
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ॥

ಅಥವಾ

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದಂ ।
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡಮರಗಳೆಂಬುವಿಲ್ಲಾ ನಾಡೊಳ್ ॥

**XI.** ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾದರಿಸಿ, ಸಾರಾಂಶವನ್ನು ಬರೆಯಿರಿ. **1*4=4**

| | |
|---|---|
| ವಿಷಯಾಂಶಕ್ಕೆ | = 3 ಅಂಕಗಳು |
| ಅಡಕವಾಗಿರುವ ಮೌಲ್ಯವನ್ನು ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿ | = 1 ಅಂಕ |
| ಒಟ್ಟು | = 4 ಅಂಕಗಳು |

**40.** ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿ ಜನ್ಮಕ ಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿ ಬೇಡ ॥

**ಈ ಪದ್ಯಭಾಗವನ್ನು ಶ್ರೀ ಕಡಕೋಳ ಮಡಿವಾಳಪ್ಪನವರು ರಚಿಸಿರುವ ತತ್ತ್ವಪದಗಳಿಂದ ಆಯ್ದ 'ಗುರುಕರುಣೆ' ಎಂಬ ತತ್ತ್ವಪದದಿಂದ ಆರಿಸಿಕೊಳ್ಳಲಾಗಿದೆ.**

**ತತ್ತ್ವಪದಕಾರರಾದ ಶ್ರೀ ಕಡಕೋಳ ಮಡಿವಾಳಪ್ಪನವರು ಮಾನವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನಡೆನುಡಿಗಳನ್ನು ಕುರಿತು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.**

**ಇಲ್ಲಿ ಸ್ನೇಹ ಎಂಬ ಮೌಲ್ಯವು ಪ್ರತಿಪಾದಿತವಾಗಿದೆ.**

**ತತ್ತ್ವಪದಕಾರರು "ಗುರುಕರುಣವಿಲ್ಲದವರ ಸ್ನೇಹವನ್ನು ಸಾಯುವತನಕ ಮಾಡಬಾರದು. ತಾನಾಡುವ ಮಾತಿನಂತೆ ನಡೆದುಕೊಳ್ಳದವನ ಸ್ನೇಹವನ್ನು ಜನ್ಮಜನ್ಮಾಂತರಕ್ಕೂ ಮಾಡಬಾರದು ಹಾಗೂ ಹೀನಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು" ಎಂದು ತಿಳಿಸಿದ್ದಾರೆ.**

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2*4=8**

**(ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ = 3 ಅಂಕಗಳು, ಪದಬಂಧ ಮತ್ತು ಭಾಷಾ ಶೈಲಿಗೆ = 1 ಅಂಕ)**

41. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮವನ್ನು ವಿವರಿಸಿ.

**ಹೊಯ್ಸಳ ಸಾಮ್ರಾಜ್ಯದ ಪ್ರಗತಿಯು ಚೋಳದೊರೆ ಕುಲೋತ್ತುಂಗನ ಕಣ್ಣು ಕುಕ್ಕಿತ್ತು. ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಸೆದೆಬಡಿಯಬೇಕು ಎಂಬುದು ಕುಲೋತ್ತುಂಗನ ಹವಣಿಕೆಯಾಗಿತ್ತು. ಪ್ರಚಂಡ ಆಶಾವಾದಿಯಾಗಿದ್ದ ಕುಲೋತ್ತುಂಗ ಅಖಂಡ ಭರತಖಂಡದ ಒಡೆತನವನ್ನು ಬಯಸಿದ್ದನು. ಹೀಗಾಗಿ ಅವನು ತನ್ನ ರಾಜಪ್ರತಿನಿಧಿಯಾದ ಆದಿಯಮನನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದನು. ಪ್ರಚೋದನೆಗೊಂಡ ಆದಿಯಮನು ದೊಡ್ಡ ದಂಡಯಾತ್ರೆಯನ್ನು ಕೈಗೊಂಡನು. ಈ ವಿಷಯವನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧವನ್ನೆದುರಿಸಿದನು. ಶಕವರ್ಷ ಒಂದು ಸಾವಿರದ ಮೂವತ್ತೆಂಟನೆಯ ಇಸ್ವಿಯಲ್ಲಿ ಮಳವಳ್ಳಿ ಮತ್ತು ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆಯಿತು. ಹೊಯ್ಸಳರ ಕೈ ಮೇಲಾಗಿ, ಚೋಳಸೇನೆ ಕಂಗಾಲಾಯಿತು. ಯುದ್ಧದಲ್ಲಿ ಆದಿಯಮ ಮಡಿದನು. ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನನ ಕೈವಶವಾಯಿತು. ವಿಷ್ಣುವರ್ಧನನಿಗೆ 'ತಲಕಾಡುಗೊಂಡ' ಎಂಬ ಬಿರುದು ಪ್ರಾಪ್ತವಾಯಿತು.**

**ಅಥವಾ**

ಬನದಮ್ಮನ ಹಳ್ಳಿಯ ಪಂಚಾಯಿತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

**ಬೀರಣ್ಣ ತನ್ನ ಹೊಲವೊಂದನ್ನು ಎರಡು ವರ್ಷಗಳ ಹಿಂದೆ ಈರಣ್ಣನಿಗೆ ಮಾರಿದ್ದನು. ಈರಣ್ಣ ಆ ಹೊಲದಲ್ಲಿ ಉಳುಮೆ ಮಾಡುವಾಗ ಹೊನ್ನು ಸಿಕ್ಕಿತು. ಅದನ್ನು ಆತ ಬೀರಣ್ಣನಿಗೆ ಒಪ್ಪಿಸಲು ಹೋದನು. ಆಗ ಬೀರಣ್ಣ "ಆ ಹೊನ್ನು ನನಗೆ ಸೇರಬೇಕಾದ್ದಲ್ಲ, ನಿನಗೇ ಸೇರಬೇಕು" ಎಂದನು. ಇಬ್ಬರೂ ಆ ಹೊನ್ನನ್ನು ತೆಗೆದುಕೊಳ್ಳಲು ಒಪ್ಪಲಿಲ್ಲ. ಹೀಗಾಗಿ ಆ ಹೊನ್ನು ಯಾರಿಗೆ ಸೇರಬೇಕು ಎಂಬ ವಿಚಾರವಾಗಿ ಬನದಮ್ಮನ ಹಳ್ಳಿ ಪಂಚಾಯಿತಿಯಲ್ಲಿ ಸಭೆ ಸೇರಿತ್ತು. ವಾದವಿವಾದಗಳು ನಡೆದು ಕೊನೆಯಲ್ಲಿ ದೈವದವರು ಇಬ್ಬರಿಗೂ ಆ ಹೊನ್ನು ಬೇಡವಾದ ಮೇಲೆ ರಾಜ್ಯದ ಬೊಕ್ಕಸ ಸೇರಲಿ" ಎಂದು ತೀರ್ಪಿತ್ತರು. ಆಗ ಮಾರುವೇಶದಲ್ಲಿದ್ದ ಶಾಂತಲೆ ಆ ತೀರ್ಪನ್ನು ಒಪ್ಪಲಿಲ್ಲ, ಕೊನೆಗೆ ಮಾರುವೇಶದಲ್ಲಿ ಶಾಂತಲೆ ಮಹಾರಾಣಿ ಎಂದು ತಿಳಿದು ಜನರು ಸಂತಸಪಟ್ಟರು. ಆಗ ಶಾಂತಲೆ "ಈ ಹೊನ್ನು ದೈವಕಾರ್ಯಕ್ಕೆ ವಿನಿಯೋಗವಾಗಬೇಕು. ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಕಲಾದೇಗುಲವೊಂದನ್ನು ದ್ವಾರಸಮುದ್ರದಲ್ಲಿ ನಿರ್ಮಿಸುವುದಕ್ಕೆ ಈ ಹೊನ್ನು ವಿನಿಯೋಗವಾಗಲಿ" ಎಂದು ತೀರ್ಪು ನೀಡಿದಾಗ ಜನ ಒಕ್ಕೊರಲಿನಿಂದ ಒಪ್ಪಿಗೆ ನೀಡಿದರು.**

42. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ, ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.

**ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ, ಗಾನರಾಣಿಯರು "ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆಯ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗ ಬಂದು ಬಿದ್ದಿರುವಾಗ**

**ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದ ದೊರೆತನ ದೊರಕಿ ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು?" ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆ ಚಿನ್ನವನ್ನು, ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವರು ಸಂತೋಷವನ್ನು ಹೊಂದುವರು. ಅವರನ್ನು ಹೋಲುವ ನಮಗೆ ಸುಡುಸುಡುನೆ ಸುಡುವ ಬಿರುಬಿಸಿಲ ಸೆಕೆಯಲ್ಲಿ ಬಿಸಿ ಉಸಿರು ಬಂದು, ಬಿಸಿಲಿನಿಂದ ಉರಿಹತ್ತಿದೆ, ಬಾಯಿ ಬತ್ತಿಹೋಗಿದೆ, ಬಿಸಿಲ ಝಳದಿಂದ ಸಾವು ಆವರಿಸುತ್ತಿದೆ, ಈ ಸಮಯದಲ್ಲಿ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು" ಎಂದರು.**

**ಅಥವಾ**

ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ, ಬರೆಯಿರಿ.

**ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ, ಗಾನರಾಣಿಯರು "ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆಯ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗಬಂದು ಬಿದ್ದಿರುವಾಗ ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದ ದೊರೆತನ ದೊರಕಿ ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು?" ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆ ಚಿನ್ನವನ್ನು, ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವರು ಸಂತೋಷವನ್ನು ಹೊಂದುವರು. ಅವರನ್ನು ಹೋಲುವ ನಮಗೆ ಸುಡುಸುಡುನೆ ಸುಡುವ ಬಿರುಬಿಸಿಲ ಸೆಕೆಯಲ್ಲಿ ಬಿಸಿ ಉಸಿರು ಬಂದು, ಬಿಸಿಲಿನಿಂದ ಉರಿಹತ್ತಿದೆ, ಬಾಯಿ ಬತ್ತಿಹೋಗಿದೆ, ಬಿಸಿಲ ಝಳದಿಂದ ಸಾವು ಆವರಿಸುತ್ತಿದೆ, ಈ ಸಮಯದಲ್ಲಿ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು" ಎಂದರು. ಪ್ರೀತಿಯಿಂದ ಎಲ್ಲವನ್ನು ಕೊಡಬಹುದು, ಬಿಡಬಹುದು. ತಾಯಿಯನ್ನು, ತಂದೆಯನ್ನು, ಸತಿಯನ್ನು, ದೇವರನ್ನು, ಮನಸಾರೆ ನಂಬಿ ವಿಶ್ವಾಸವಿಟ್ಟ ಪರಿವಾರವನ್ನು ಕೊಡುವ ಅತಿಶೂರರು ಜನರಲ್ಲಿ (ಲೋಕದಲ್ಲಿ) ಜನಿಸರು" ಎಂದನು. ಆಗ ಗಾನರಾಣಿಯರು ಹರಿಶ್ಚಂದ್ರನನ್ನು ಕುರಿತು "ಮಹಾರಾಜ ನೀನು ಈಗ ಹೇಳಿದ ಅನಿತರಲ್ಲಿ ಬೇಡಿದೊಡೆ ಕೊಡಬೇಡ. ಸತ್ತಿಗೆಯನ್ನು ಕೊಡು ಎಂದರೆ ಲೋಭವೇಕೆ?" ಎಂದರು.**

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*4=4 (2+2)**

**43. (ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು)**

**ಪ್ರಶ್ನೆಗಳು :**

43. ಅ) ಗೀಜುಗಗಳು ಗೂಡು ಕಟ್ಟುವಾಗ ತೆಗೆದುಕೊಳ್ಳುವ ಎಚ್ಚರಿಕೆಗಳೇನು?

**ಗೀಜುಗವು ಗೂಡು ಕಟ್ಟುವಾಗ, ಸ್ಥಳ ಆಯ್ಕೆ ಮಾಡುವಾಗ ಗೀಜುಗ ಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡು ಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಗದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟುತ್ತವೆ. ಆದರೆ ನೆಲಮಟ್ಟದಲ್ಲಿ ಹಾಗೆ ಗೂಡು ಕಟ್ಟುವಾಗಲೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯ, ನದಿ ಕೆರೆಗಳ ಕಮರಿಯೋ ಇರುವೆಡೆ ಬಾಗಿರುವ ಕೊಂಬೆಯ ತುದಿಗೆ ಗೂಡು ಕಟ್ಟುತ್ತದೆ.**

43. ಬ) ಗುಬ್ಬಚ್ಚಿಗೂ ಗೀಜುಗನಿಗೂ ಇರುವ ವ್ಯತ್ಯಾಸಗಳೇನು?

**ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪುಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದಾಗಿದೆ.**

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*5=5**

**44.** ನಿಮ್ಮನ್ನು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಹೊಮ್ಮರಗಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸುರಭಿ' ಎಂದು ಭಾವಿಸಿಕೊಂಡು, ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಹೆಗ್ಗಡದೇವನಕೋಟೆ ತಾಲೂಕಿನ ತಹಶೀಲ್ದಾರರವರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನವೀನ್' ಎಂದು ಭಾವಿಸಿಕೊಂಡು ಬೆಂಗಳೂರಿನ ಕೃಷ್ಣರಾಜಪುರಂನಲ್ಲಿ ವಾಸವಾಗಿರುವ ನಿಮ್ಮ ಗೆಳೆಯ 'ಚಂದನ್' ಎನ್ನುವವನಿಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಸಂಭ್ರಮವನ್ನು ಕುರಿತು ಪತ್ರ ಬರೆಯಿರಿ.

| **ವ್ಯಾವಹಾರಿಕ ಪತ್ರ** | |
|---|---|
| **ಇಂದ, ಗೆ, ದಿನಾಂಕ, ಸ್ಥಳ, ಸಂಬೋಧನೆ, ವಿಷಯ** | **= 1 ಅಂಕ** |
| **ಪತ್ರದ ಒಡಲು ವಿಷಯ ನಿರೂಪಣೆ** | **= 2 ಅಂಕಗಳು** |
| **ವಂದನೆಯೊಂದಿಗೆ ಮುಕ್ತಾಯ, ಇಂತಿ, ಸಹಿ.** | **= 1 ಅಂಕ** |
| **ಪದ ಬಳಕೆ, ಭಾಷಾಶೈಲಿ ವಿನ್ಯಾಸ** | **= 1 ಅಂಕ** |

****

| **ಖಾಸಗಿ ಪತ್ರ** | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **= 1 ಅಂಕ** |
| **ಪತ್ರದ ಒಡಲು ವಿಷಯ ನಿರೂಪಣೆ** | **= 2 ಅಂಕಗಳು** |
| **ಮುಕ್ತಾಯ, ಇಂತಿ, ಸಹಿ, ಹೊರವಿಳಾಸ** | **= 1 ಅಂಕ** |
| **ಪದ ಬಳಕೆ, ಭಾಷಾಶೈಲಿ ವಿನ್ಯಾಸ** | **= 1 ಅಂಕ** |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವನ್ನು ಬರೆಯಿರಿ.** .

**1*5=5**

**ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ = 1 ಅಂಕ**
**ವಿಷಯ ನಿರೂಪಣೆ / ಒಡಲು / ಸಮರ್ಥ ವಿವರಣೆ = 2 ಅಂಕಗಳು**
**ಉಪ ಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ = 1 ಅಂಕ**
**ಪದಬಂಧ, ಭಾಷಾಶೈಲಿ = 1 ಅಂಕ**

**45**. ಸಾವಯವ ಕೃಷಿ

**ಅಥವಾ**

ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳು.

ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 1 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 2 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 3 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 4 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 5 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 6 | ವ್ಯಾಕರಣಾಂಶ | ಜ್ಞಾನ / ಸ್ಮರಣೆ | ಸ್ಮರಿಸಿ, ಆಯ್ಕೆ ಮಾಡುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 7 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 8 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 9 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 10 | ವ್ಯಾಕರಣಾಂಶ | ಗ್ರಹಿಕೆ | ಗ್ರಹಿಸಿ, ಸಂಬಂಧೀಕರಿಸುವರು | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 11 | ಬೆಡಗಿನ ತಾಣ ಜಯಪುರ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 12 | ಕನ್ನಡ ಮೌಲ್ವಿ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 13 | ಊರುಭಂಗ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 14 | ಹರಲೀಲೆ | ಗ್ರಹಿಕೆ | ಬರೆಯುತ್ತಾನೆ/ಳೆ | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 15 | ಹೊಸಹಾಡು | ಗ್ರಹಿಕೆ | ಬರೆಯುತ್ತಾನೆ/ಳೆ | ಅತಿ ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 16 | ಮರಳಿ ಮನೆಗೆ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಕಿರು ಉತ್ತರ 2 | 1 | ಸುಲಭ | 2 ನಿಮಿಷಗಳು |
| 17 | ಪುಟ್ಟಹಕ್ಕಿ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ಕಿರು ಉತ್ತರ 2 | 1 | ಸುಲಭ | 2 ನಿಮಿಷಗಳು |
| 18 | ಧರ್ಮಸಮದೃಷ್ಟಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 19 | ಹರಲೀಲೆ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸುಲಭ | 4 ನಿಮಿಷಗಳು |
| 20 | ಊರುಭಂಗ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 21 | ಹೊಸಹಾಡು | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 22 | ಧರ್ಮಸಮದೃಷ್ಟಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 23 | ಪಾರಿವಾಳ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 24 | ರಂಜಾನ್ ಸುರಕುಂಬಾ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 25 | ನನ್ನಾಸೆ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 26 | ಗುಣಸಾಗರಿ ಪಂಢರೀಬಾಯಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 27 | ಉರಿದ ಬದುಕು | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 28 | ಕನ್ನಡ ಮೌಲ್ವಿ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 29 | ನಿಯತಿಯನಾರ್ ಮೀರಿದಪರ್ | ಜ್ಞಾನ / ಸ್ಮರಣೆ | ಸ್ಮರಿಸಿ, ಉತ್ತರಿಸುವರು | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 30 | ಛಂದಸ್ಸು | ಗ್ರಹಿಕೆ | ಪ್ರಸ್ತಾರ ಹಾಕುತ್ತಾನೆ / ಳೆ | ದೀರ್ಘ ಉತ್ತರ 1 | 3 | ಸುಲಭ | 5 ನಿಮಿಷಗಳು |
| 31 | ಅಲಂಕಾರ | ಗ್ರಹಿಕೆ | ಸಮನ್ವಯಗೊಳಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಕಠಿಣ | 5 ನಿಮಿಷಗಳು |
| 32 | ಗಾದೆ ವಿಸ್ತರಿಸಿ ಬರೆಯುವುದು | ಗ್ರಹಿಕೆ | ವಿಸ್ತರಿಸಿ ಬರೆಯುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 33 | ಬೆಡಗಿನ ತಾಣ ಜಯಪುರ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 34 | ಜನಪದ ಕಲೆಗಳ ವೈಭವ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 35 | ಆ. ಶಿ. ಸ. ರಾಧಾಕೃಷ್ಣನ್ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 36 | ಪಾರಿವಾಳ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 37 | ಸಿರಿಯನಿನ್ನೇನ ಬಣ್ಣಿಪೆನು | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 38 | ಮರಳಿ ಮನೆಗೆ | ಅಭಿವ್ಯಕ್ತಿ | ಸಂದರ್ಭದೊಡನೆ ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 1 | 3 | ಸಾಧಾರಣ | 5 ನಿಮಿಷಗಳು |
| 39 | ಕನ್ನಡ ನಾಡು ನುಡಿ | ಜ್ಞಾನ / ಸ್ಮರಣೆ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 2 | 4 | ಸುಲಭ | 7 ನಿಮಿಷಗಳು |
| 40 | ತತ್ತ್ವಪದಗಳು | ಪ್ರಶಂಸೆ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 41 | ಪ್ರಜಾನಿಷ್ಠೆ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 42 | ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ದೀರ್ಘ ಉತ್ತರ 2 | 4 | ಕಠಿಣ | 7 ನಿಮಿಷಗಳು |
| 43 | ಅಪಠಿತ ಗದ್ಯ | ಗ್ರಹಿಕೆ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 2 | 4 | ಸುಲಭ | 7 ನಿಮಿಷಗಳು |
| 44 | ಪತ್ರಲೇಖನ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 3 | 5 | ಸಾಧಾರಣ | 8 ನಿಮಿಷಗಳು |
| 45 | ಪ್ರಬಂಧ ಲೇಖನ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ದೀರ್ಘ ಉತ್ತರ 3 | 5 | ಕಠಿಣ | 8 ನಿಮಿಷಗಳು |
| 45 | ಒಟ್ಟು | | | | 100 | | 180 ನಿಮಿಷಗಳು + 15 ನಿಮಿಷಗಳು |

**ಶುಭವಾಗಲಿ**